# ಇಂಟರ್‌ನ್ಯಾಷನಲ್ ಕಾಂಪಿಟೀಷನ್ ಫಾರ್ ಯಂಗ್ ಡಿಬೇಟ್ಸ್‌ನಲ್ಲಿ ಪ್ರಶಸ್ತಿ

■ **ವಿಕ ಸುದ್ದಿಲೋಕ** ಮಂಗಳೂರು

ಕೇಂಬ್ರಿಜ್‌ನಲ್ಲಿ ಇತ್ತೀಚೆಗೆ ನಡೆದ ಇಂಟರ್‌ನ್ಯಾಷನಲ್ ಕಾಂಪಿಟೀಷನ್ ಫಾರ್ ಯಂಗ್ ಡಿಬೇಟ್ಸ್ (ಐಸಿವೈಡಿ)ನಲ್ಲಿ ಭಾರತವನ್ನು ಪ್ರತಿನಿಧಿಸಿದ ರ‍್ಯಾಂಪ್ಕೋ ಸಮೂಹ ಸಂಸ್ಥೆಯ ನಡೆಸುತ್ತಿರುವ ದಿ.ಇಂಡಿಯನ್ ಸ್ಕೂಲ್ಸ್ ಡಿಬೇಟಿಂಗ್ ಸೊಸೈಟಿ (ಐಎಸ್‌ಡಿಎಸ್) ತಂಡ ಪ್ರಶಸ್ತಿ ಜಯಿಸಿದೆ.

2008ರಲ್ಲಿ ಆರಂಭಗೊಂಡ ಐಎಸ್‌ಡಿಎಸ್, ಪ್ರತಿ ವರ್ಷ ವಿದ್ಯಾರ್ಥಿಗಳಿಗೆ ಚರ್ಚಾ ಕೂಟ ಆಯೋಜಿಸಿಕೊಂಡು ಬರುತ್ತಿದೆ. ವಿಶ್ವದ ನಾನಾ ಭಾಗದಲ್ಲಿರುವ ಅತ್ಯುತ್ತಮ ಚರ್ಚಾ ಪಟುಗಳಿಂದ ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡಿಕೊಂಡು ಬರುತ್ತಿದೆ. ವರ್ಲ್ಡ್ ಸ್ಕೂಲ್ಸ್ ಡಿಬೇಟಿಂಗ್ ಚಾಂಪಿಯನ್‌ಶಿಪ್‌ನ ಭಾರತೀಯ ಪ್ರತಿನಿಧಿಯಾಗಿ ಸಂಸ್ಥೆಯು ಪ್ರತಿ ವರ್ಷ ರಾಷ್ಟ್ರೀಯ ಮಟ್ಟದ ಚರ್ಚಾ ಕೂಟವನ್ನು ಆಯೋಜಿಸಿಕೊಂಡು ಬರುತ್ತಿದೆ. ಖಾಸಗಿ, ಕೇಂದ್ರೀಯ ವಿದ್ಯಾಲಯ ಸೇರಿದಂತೆ ದೇಶದ ನಾನಾ ಸಂಸ್ಥೆಗಳಲ್ಲಿ ಕಲಿಯುತ್ತಿರುವ 300ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಇದೀಗ ಐಸಿವೈಡಿಯು ಹದಿನೈದು ವರ್ಷ ಮತ್ತು ಅದಕ್ಕಿಂತ ಕೆಳಗಿನ ವರ್ಷದ ವಿದ್ಯಾರ್ಥಿಗಳಿಗಾಗಿ ಅಂತಾರಾಷ್ಟ್ರೀಯ ಚರ್ಚಾ ಸ್ಪರ್ಧೆಯನ್ನು ಆಯೋಜಿಸಿತ್ತು. ಇದರಲ್ಲಿ ಭಾಗವಹಿಸಿದ್ದ ಚೆನ್ನೈನ ಕೆಕೆ ನಗರದ ಪಿಎಸ್‌ಬಿಬಿ ಸೀನಿಯರ್ ಸೆಕೆಂಡರ್ ಸ್ಕೂಲ್‌ನ



ತೇಜಸ್ ಸುಬ್ರಹ್ಮಣ್ಯಂ ಮತ್ತು ಹರ್ಷಿತ್ ರವಿಚಂದ್ರನ್ ವಿಜೇತರಾಗಿದ್ದಾರೆ. ಚಂದ್ರಶೇಖರ್ ಶ್ರೀರಾಮ್ ಅವರು ಮಾರ್ಗದರ್ಶಕರಾಗಿದ್ದರು. ಬ್ರಿಟಿಷ್ ಪಾರ್ಲಿಮೆಂಟ್ ಮಾದರಿಯಲ್ಲಿ ಐಸಿವೈಡಿ ಚರ್ಚಾ ಕೂಟವನ್ನು ಆಯೋಜಿಸುತ್ತಿದೆ. ಇದೊಂದು ಕಠಿಣ ಚರ್ಚಾ ಸ್ಪರ್ಧೆಯಾಗಿದೆ. 15 ನಿಮಿಷದ ಮೊದಲು ವಿಷಯವನ್ನು ನೀಡಲಾಗುತ್ತದೆ. ಸಿದ್ಧತೆಗಾಗಿ 15 ನಿಮಿಷಗಳನ್ನು ನೀಡಲಾಗುತ್ತದೆ. ಸಿದ್ಧತೆಗೆ ಯಾವುದೇ ಎಲೆಕ್ಟ್ರಾನಿಕ್ಸ್ ಉಪಕರಣ, ಮುದ್ರಿತ ಮಾಹಿತಿ, ಸಲಹೆಗಾರರು ಹೀಗೆ ಯಾವುದೇ ಸಹಾಯ ಇಲ್ಲದೆ ಇಬ್ಬರ ತಂಡವು ಸಿದ್ಧರಾಗಬೇಕಾಗುತ್ತದೆ.